# KANNADA PRABHA

**Date:** November 14, 2014 **Page No.** 04

**Edition:** Mysore **Language: Kannada**

# ಕಂಪನಿ ಕಾಯ್ದೆ ಹೊಣೆಗಾರಿಕೆಗೆ ಸಹಕಾರಿ

ಮೈಸೂರು: ನೂತನ ಕಂಪನಿ ಕಾಯ್ದೆಯು ಸಾಮಾಜಿಕ ಹೊಣೆಗಾರಿಕೆಗೆ ತುಂಬ ಉಪಯುಕ್ತವಾಗಿದೆ ಎಂದು ಟಾಟಾ ಕನ್ಸ‌ಲ್ಟಿಂಗ್ ಎಂಜಿನಿಯರ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಜೆ.ಪಿ. ಹರನ್ ಹೇಳಿದರು.

ಶ್ರೀಧರ್ಮಸ್ಥಳ ಮಂಜುನಾಥೇಶ್ವರ ನಿರ್ವಹಣಾ ಅಭಿವೃದ್ಧಿ ಸಂಸ್ಥೆ ವತಿಯಿಂದ ಚಾಮುಂಡಿಬೆಟ್ಟದ ತಪ್ಪಲಿನ ಸಂಸ್ಥೆಯ ಸಭಾಂಗಣದಲ್ಲಿ ಗುರುವಾರ ಏರ್ಪಡಿಸಿದ್ದ ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ ಎಂಬ ವಿಷಯ ಕುರಿತ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

ಉದ್ಯಮಗಳು ಕೇವಲ ವ್ಯಾಪಾರ ವಹಿವಾಟು ಹಾಗೂ ಉತ್ಪನ್ನಗಳು ಮತ್ತು ಮಾರುಕಟ್ಟೆಗೆ ಮಾತ್ರ ಸೀಮಿತವಲ್ಲ. ಅವುಗಳಿಗೂ ಸಾಮಾಜಿಕ ಬದ್ಧತೆ ಇರಬೇಕು ಎಂಬ ಕಾರಣಕ್ಕೆ ಕೇಂದ್ರ ಸರ್ಕಾರವು 2013ರಲ್ಲಿ ಕಂಪನಿ ನಿಯಮಾವಳಿಗಳಲ್ಲಿ ಬದಲಾವಣೆಯನ್ನು ತಂದು ಅವುಗಳಿಗೂ ಸಾಮಾಜಿಕ ಜವಾಬ್ದಾರಿಯನ್ನು ವಹಿಸಿದೆ. ವಿಶ್ವದಲ್ಲಿಯೇ ಇಂತಹ ಕಾಯ್ದೆ ಪರಿಚಯಿಸಿದ ಹೆಗ್ಗಳಿಕೆ ಭಾರತಕ್ಕೆ ಸಲ್ಲಲಿದೆ ಎಂದರು.

ವಿಚಾರ ಗೋಷ್ಠಿಯಲ್ಲಿ ಕೆಟಲಿಸ್ಟ್ ಇಂಡಿಯಾ ವಿಮನ್ ಆ್ಯಂಡ್ ಕನ್ಸ‌ಲ್ಟಿಂಗ್ ಕಾರ್ಯನಿರ್ವಾಹಕ ನಿರ್ದೇಶಕಿ ಶಚಿ ಇರ್ದೆ, ಕೊಪಲ್ ಅಂಬಾ ವ್ಯವಸ್ಥಾಪಕ ನಿರ್ದೇಶಕಿ ಪ್ರೀತಿ ಪಾರೇಖ್, ವಿಜಯ್ ಫೌಂಡೇಷ್‌ನ ವ್ಯವಸ್ಥಾಪಕ ನಿರ್ದೇಶಕ ಡಾ. ಬಿ.ಆರ್. ಪೈ, ಎಸ್ಕೆಡಿಆರ್‌ಡಿಪಿಯ ವ್ಯವಸ್ಥಾಪಕ ನಿರ್ದೇಶಕ ಡಾ.ಎಲ್.ಎಚ್. ಮಂಜುನಾಥ್ ಅವರು ಮಾತನಾಡಿದರು.

ಕಾರ್ಯಕ್ರಮದ ಸಂಘಟನಾ ಸಮಿತಿ ಅಧ್ಯಕ್ಷೆ ಡಾ. ಎಚ್. ಗಾಯತ್ರಿ, ಸಹಅಧ್ಯಕ್ಷರಾದ ಡಾ.ಎಂ.ಆರ್. ಸುರೇಶ್, ಪ್ರೊ. ಗೋವಿಂದಶರ್ಮ ಇದ್ದರು.



ಮೈಸೂರಿನ ಶ್ರೀಧರ್ಮಸ್ಥಳ ಮಂಜುನಾಥೇಶ್ವರ ನಿರ್ವಹಣಾ ಅಭಿವೃದ್ಧಿ ಸಂಸ್ಥೆ ಗುರುವಾರ ಏರ್ಪಡಿಸಿದ್ದ ವಿಚಾರ ಸಂಕಿರಣದಲ್ಲಿ ಟಾಟಾ ಕನ್ಸಲ್ಟಿಂಗ್ ಎಂಜಿನಿಯರ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಜೆ.ಪಿ. ಹರನ್ ಮಾತನಾಡಿದರು.